(ಇಂದು ದಿನಾಂಕಃ 24-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಂದುವರೆದ ಮುಖ್ಯ ವಿಚಾರಣೆಃ ಶ್ರೀ ಬಿ.ವಿ.ಪಿ ವಕೀಲರಿಂದ (ಅರ್ಜಿದಾರರ ಪರ)</u>**

- ಎರಡು ಬಿಲ್ಲುಗಳನ್ನು ಸಲ್ಲಿಸಿದ್ದು ಅದನ್ನು ನಿ.ಪಿ-24 ಮತ್ತು ನಿ.ಪಿ-25 ಎಂದು, ಗುರುತಿಸಲಾಯಿತು.

**<u>ಪಾಟೀ ಸವಾಲು ಶ್ರೀ ವಿ.ಎನ್.ಎಮ್ ಎದುರುದಾರ ಪರ ವಕೀಲರಿಂದಃ</u>**

1. ಅಪಘಾತವು 2022 ರಲ್ಲಿ ಆಗಿದೆ. ನಾನು ಗುಲ್ಬರ್ಗಾಕೆ ಹೋಗುತ್ತಿದ್ದಾಗ ಅಪಘಾತ ಆಗಿದೆ. ನಾವು ಮಾಗಾವ ಕ್ರಾಸ್ ನಿಂದ ಗುಲ್ಬರ್ಗಾಕ್ಕೆ ಹೋಗುತ್ತಿದ್ದೆವು. ಅಪಘಾತದ ಸ್ಥಳವು ರಸ್ತೆಯ ಬಲ ಭಾಗಕ್ಕೆ ಬರುತ್ತದೆ ಎಂದರೆ ಸರಿ. ಅಪಘಾತದ ಸ್ಥಳ ರಾಷ್ಟ್ರಿಯ ಹೆದ್ದಾರಿ ಇದೆ ಎಂದರೆ ಸರಿ. ನಾನು ಎದುರುಗಡೆಯಿಂದ ರಸ್ತೆ ದಾಟುತ್ತಿರುವಾಗ ಅಪಘಾತ ಆಗಿದೆ ಎಂದರೆ ಸರಿ. ಆ ಕಾರ ನಂಬರ ನನಗೆ ನನ್ನ ಮೈದುನ ಮತ್ತು ಅವನ ಹೆಂಡತಿ ಹೇಳಿದರು. ನನ್ನ ಅಜಾಗರುಕತೆಯಿಂದ ಈ ಅಪಘಾತ ಆಗಿದೆ ಎಂದರೆ ಸಾಕ್ಷಿ ನಾನು ನೋಡಿದಾಗ ಯಾವುದೇ ವಾಹನ ಕಾಣುತ್ತಿರಲ್ಲಿಲ್ಲ ಆದರೆ ವಾಹನ ಅತಿ ವೇಗವಾಗಿ ಬಂದು ಗುದ್ದಿರುತ್ತದೆ ಎಂದು ಹೇಳುತ್ತಾರೆ. ಆ ಚಾಲಕನ ತಪ್ಪು ಇಲ್ಲದಿದ್ದರು ಸಹ ನಾನು ಅವನ ವಿರುದ್ಧ ಸುಳ್ಳು ದೂರು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದ ನಂತರ ಮೊದಲು ಗುಲ್ಬರ್ಗಾದ ಸರಕಾರಿ ಆಸ್ಪತ್ರೆಗೆ ಹೋಗಿದ್ದೆ ಅಲ್ಲಿಂದ ಕಾಮರೆಡ್ಡಿ ಆಸ್ಪತ್ರೆಗೆ ಹೋಗಿರುತ್ತೇನೆ. ಅದೆ ಕಾರಿನಲ್ಲಿ ನನನ್ನು ಗುಲ್ಬರ್ಗಾದ ಸರಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ಕಾಮರೆಡ್ಡಿ ಆಸ್ಪತ್ರೆಯಲ್ಲಿ ನಾನು 9 ದಿನ ಚಿಕಿತ್ಸೆ ಪಡೆದಿರುತ್ತೆನೆ. ನಾನು ಸಲ್ಲಿಸಿದ ದಾಖಲೆಯ ಪ್ರಕಾರ ನಾನು 4 ದಿನ ಚಿಕಿತ್ಸೆ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಾನು ಸಲ್ಲಿಸಿದ ಆಸ್ಪತ್ರೆ ಬಿಡುಗಡೆ ಪತ್ರ ಸಲ್ಲಿಸಿರುತ್ತೇನೆ. ನಾನು ಯಾವುದೇ ಪರಿಹಾರದ ಹಣ ಪಡೆದಿಲ್ಲ. ನಿ.ಪಿ-15 ಓರಿಜನಲ್ ಬಿಲ್ ಅಲ್ಲ ಎಂದರೆ ಸರಿ. ನಾನು ಬೇರೆ ಕಡೆ ಪರಿಹಾರದ ಹಣ ಪಡೆದಿದ್ದರು ಸಹ ಈ ಸುಳ್ಳು ಅರ್ಜಿ ಸಲ್ಲಿಸಿದೇನೆ

ಎಂದರೆ ಸರಿಯಲ್ಲ. ನಾನು ಹೆಚ್ಚಿನ ಪರಿಹಾರ ಹಣ ಪಡೆಯುವ ಉದ್ದೇಶದಿಂದ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಟೇಲರಿಂಗ ಕೆಲಸ ಮತ್ತು ಹೊಲದ ಕೆಲಸ ಮಾಡುತ್ತಿದ್ದೆ. ನಾನು ಟೇಲರಿಂಗ ಕೆಲಸ ಮತ್ತು ಹೊಲದ ಕೆಲಸ ಮಾಡುತ್ತಿದ್ದೆ ಎಂದು ತೋರಿಸಲು ದಾಖಲೆ ಸಲ್ಲಿಸಿಲ್ಲ. ನಾನು ತಿಂಗಳಿಗೆ ರೂ.30,000/- ಆದಾಯ ಬರುತ್ತಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಅಪಘಾತ ನನ್ನ ತಪ್ಪಿನಿಂದ ಆಗಿದ್ದರು ಸಹ ನಾನು ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದೂರು ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ನಾನು ಅಂಗನ್ಯೂನ್ಯತೆ ಪ್ರಮಾಣ ಪತ್ರವನ್ನು ಸೃಷ್ಟಿಸಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಪರಿಹಾರದ ಹಣ ಪಡೆಯಲು ಸುಳ್ಳು ಅರ್ಜಿಯನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.